RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ



| ಭಾಗ-IVA | ಬೆಂಗಳೂರು, ಮಂಗಳವಾರ, ಮಾರ್ಚ್ ೨೮, ೨೦೧೭ (ಚೈತ್ರ ೦೭, ಶಕ ವರ್ಷ ೧೯೩೮) | ನಂ. ೩೦೫ |
|---|---|---|
| Part-IVA | Bengaluru, Tuesday, March 28, 2017 (Chaitra 07, Shaka Varsha 1938) | No. 305 |



ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 72 ಎಲ್‌ಇಟ 2013, ಬೆಂಗಳೂರು, ದಿನಾಂಕ: 27-03-2017

1946ರ ಔದ್ಯೋಗಿಕ ಉದ್ಯೋಗಗಳ (ಸ್ಥಾಯಿ ಆದೇಶಗಳು) ಕಾಯ್ದೆಯ (ಕೇಂದ್ರದ 1946ರ ಕಾಯ್ದೆ ಸಂಖ್ಯೆ XX) ಕಲಂ 15ರ ಉಪಕಲಂ (1)ರಡಿಯಲ್ಲಿ ಅಗತ್ಯವಿರುವಂತೆ 2009ರ ಕರ್ನಾಟಕ ಕೈಗಾರಿಕಾ ಉದ್ಯೋಗಗಳ (ಸ್ಥಾಯಿ ಆದೇಶಗಳು) ನಿಯಮಾವಳಿಗೆ ತಿದ್ದುಪಡಿ ತರಲು ಅಧಿಸೂಚನೆ ಸಂ: ಕಾಇ 282 ಎಲ್‌ಇಟಿ 2009, ಬೆಂಗಳೂರು, ದಿನಾಂಕ: 07.12.2009ರಂದು ಕರ್ನಾಟಕ ರಾಜ್ಯಪತ್ರದ ಭಾಗ-IV-Aರಲ್ಲಿ ಪ್ರಕಟಿಸಿ, ಸದರಿ ಕರಡು ಅಧಿಸೂಚನೆಗೆ ಬಾಧಿತರಾಗುವವರು ಆಕ್ಷೇಪಣೆಗಳು ಹಾಗೂ ಸಲಹೆಗಳೇನಾದರು ಇದ್ದಲ್ಲಿ ಅಧಿಸೂಚನೆ ಪ್ರಕಟವಾದ 30 ದಿನಗಳೊಳಗಾಗಿ ಸಲ್ಲಿಸಲು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ ಆಹ್ವಾನಿಸಲಾಗಿತ್ತು. ಸದರಿ ರಾಜ್ಯಪತ್ರವು ಸಾರ್ವಜನಿಕರಿಗೆ ದಿನಾಂಕ: 07.12.2009ರಂದು ಲಭ್ಯವಾಗಿರುತ್ತದೆ.

ಸದರಿ ರಾಜ್ಯಪತ್ರದ ಪ್ರಕಟಣೆಗೆ ಸ್ವೀಕೃತವಾದ ಆಕ್ಷೇಪಣೆ ಹಾಗೂ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣನೆಗೆ ತೆಗೆದುಕೊಂಡಿರುತ್ತದೆ. ಹಾಗಾಗಿ 1946ರ ಔದ್ಯೋಗಿಕ ಉದ್ಯೋಗಗಳ (ಸ್ಥಾಯಿ ಆದೇಶಗಳು) ಕಾಯ್ದೆಯ (ಕೇಂದ್ರದ 1946ರ ಕಾಯ್ದೆ ಸಂಖ್ಯೆ XX) ಕಲಂ 15ರ ಉಪಕಲಂ (1)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯ ಸರ್ಕಾರವು ಈ ಕೆಳಕಂಡಂತೆ ನಿಯಮಾವಳಿಯನ್ನು ರಚಿಸಿರುತ್ತದೆ.

ನಿಯಮಗಳು

1. **ಶೀರ್ಷಿಕೆ ಮತ್ತು ಆರಂಭ** :- (i) ಸದರಿ ನಿಯಮಾವಳಿಯನ್ನು 2017ರ ಔದ್ಯೋಗಿಕ ಉದ್ಯೋಗಗಳ(ಸ್ಥಾಯಿ ಆದೇಶಗಳು)(ತಿದ್ದುಪಡಿ) ನಿಯಮಾವಳಿ ಎಂದು ಕರೆಯಬಹುದಾಗಿರುತ್ತದೆ.

(ii) ಈ ನಿಯಮಾವಳಿಯು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುತ್ತದೆ.

2. **ಅನುಸೂಚಿ-1ಕ್ಕೆ ತಿದ್ದುಪಡಿ** :- 1961ರ ಕರ್ನಾಟಕ ಔದ್ಯೋಗಿಕ ಉದ್ಯೋಗಗಳ (ಸ್ಥಾಯಿ ಆದೇಶಗಳು) ನಿಯಮಾವಳಿಯ ಅನೂಸೂಚಿ-1 ರಲ್ಲಿ :

(i) 'ಗುಮಾಸ್ತ ಮತ್ತು ಲಿಪಿಕ ನೌಕರರನ್ನು ಹೊರತುಪಡಿಸಿದ ಕಾರ್ಮಿಕರ ಮಾದರಿ ಸ್ಥಾಯಿ ಆದೇಶಗಳ ಕುರಿತಂತೆ' ಇರುವ ಶೀರ್ಷಿಕೆಯಡಿಯಲ್ಲಿ ನಿಯಮ-3(1): ಎ ರ ಕಂಡಿಕೆ 15-ಎ ರಲ್ಲಿ ನಮೂದಿಸಿರುವ "58 ವರ್ಷಗಳು" ಎಂಬ ಪದಗಳು ಹಾಗೂ ಅಂಕಿಗಳ ಬದಲಾಗಿ "60 ವರ್ಷಗಳು" ಎಂದು ಬದಲಾಯಿಸಿದೆ.

Scanned by CamScanner

(ii) 'ಗುಮಾಸ್ತರಿಗಾಗಿ ಮಾದರಿ ಸ್ಥಾಯಿ ಆದೇಶಗಳು' ಎಂಬ ಶೀರ್ಷಿಕೆಯಡಿಯಲ್ಲಿ, ನಿಯಮ-3(1): ಬಿರ ಕಂಡಿಕೆ 22-ಎರಲ್ಲಿ ನಮೂದಿಸಿರುವ "58 ವರ್ಷಗಳು" ಎಂಬ ಪದಗಳು ಹಾಗೂ ಅಂಕಿಗಳ ಬದಲಾಗಿ "60 ವರ್ಷಗಳು" ಎಂದು ಬದಲಾಯಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ.

**ಎಲ್.ಎಸ್. ಶ್ರೀಕಂಠಬಾಬು**
ಸರ್ಕಾರದ ಉಪ ಕಾರ್ಯದರ್ಶಿ-1,
ಕಾರ್ಮಿಕ ಇಲಾಖೆ.

**LABOUR SECRETARIAT**

**NOTIFICATION**

**No: LD 72 LET 2013, Bengaluru, Dated: 27-03-2017**

Whereas the draft of the the Karnataka Industrial Employment (Standing Orders) (Amendment) Rules, 2009 was published as required by sub-section (1) of section 15 of the Industrial Employment (Standing Orders) Act, 1946 (Central Act XX of 1946), in Notification No: LD 282 LET 2009, dated: 07.12.2009 in Part IV-A of the Karnataka Gazette Extraordinary dated: 07.12.2009, inviting objections and suggestions from all the persons likely to be affected thereby within thirty days from the date of its publication in the Official Gazette.

And whereas the said Gazette was made available to the public on 07.12.2009.

And whereas the objections and suggestions received in this regard have been considered by the State Government.

Now, therefore, in exercise of the powers conferred by sub-section (1) of section 15 of the Industrial Employment (Standing Orders) Act, 1946 (Central Act XX of 1946), the Government of Karnataka hereby makes the following rules, namely:-

**RULES**

1. **Title and commencement :-** (i) These rules may be called the Karnataka Industrial Employment (Standing Orders) (Amendment) Rules, 2017.

(ii) They shall come into force from the date of their publication in the Official Gazette.

**2. Amendment of Schedule-I :-** In the Karnataka Industrial Employment(Standing Orders) Rules, 1961, in Schedule-I:

(i) under the heading "Model Standing Orders prescribed under Rule 3(1) : A- For workmen excluding clerks and other ministerial staff", in the entries at Sl.No.15-A, for the words and figures "58 years" the words and figures "60 years" shall be substituted.

(ii) under the heading "Model Standing Orders prescribed under Rule 3(1) : B- For Clerks and other Ministerial Staff", in the entries at Sl.No. 22-A, for the words and figures "58 years" the words and figures "60 years" shall be substituted.

By order and in the name of the Governor of Karnataka

**L. S. Srikanta Babu**
Deputy Secretary to Government,
Department of Labour.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಬಿ7) ಪ್ರತಿಗಳು: 200

Scanned by CamScanner